
# ಬೆಳಕಿನ ಸಂಚಲನ

ಸಂಪುಟ 6, ಸಂಚಿಕೆ 4 | ದ್ವೈಮಾಸಿಕ ವಾರ್ತಾಪತ್ರ | ಜುಲೈ–ಆಗಸ್ಟ್ 2018



**ಗುರೂಜಿ ಕೃಷ್ಣಾನಂದ** (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷ ಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಭಾಷಣದ ಆಯ್ದ ಭಾಗಗಳು – ಏಪ್ರಿಲ್ 9, 2000)

**ಅನು: ಶ್ರೀದೇವಿ**

ಶಿಸ್ತು, ಮಾರ್ಗದರ್ಶನ ಸೂತ್ರಗಳನ್ನು ಅಥವಾ ಆದೇಶಗಳನ್ನು ಅಥವಾ ಕೆಲವೊಂದು ತತ್ವಗಳನ್ನು ಮೊದಲಿಗೆ ಗೌರವಿಸಿ ನಂತರ ಅನುಸರಿಸುವುದಾಗಿದೆ. ಇದು ಬಲವಂತದ ಮತಾಚರಣೆಯಂತೆ ಯಾಂತ್ರಿಕವಾಗಿ ಅನುಸರಿಸುವುದಲ್ಲ. ಬಲವಂತದಿಂದ ಅನುಸರಿಸುವುದು ಶಿಸ್ತಲ್ಲ. ಇದರ ಹಿಂದೆ ಸಮ್ಮತಿ, ಸಂಪೂರ್ಣವಾದ ಸಮ್ಮತಿ ಹಾಗೂ ಪ್ರೀತಿಯಿರಬೇಕು. ಈ ರೀತಿಯಾಗಿ ನೀವು ಶಿಸ್ತನ್ನು ಪಾಲಿಸಿದರೆ ಅದು ಅತ್ಯುತ್ತಮವಾದ ವಿಧಾನವಾಗುತ್ತದೆ. ನಮಗೆ ಆಯ್ಕೆ ಇಲ್ಲದಿದ್ದಾಗ; ಭಯದಿಂದ ಅಥವಾ ಒಂದು ರೀತಿಯ ಒತ್ತಾಯದಿಂದ ಪಾಲಿಸಿದರೆ ಅದು ನಿಜವಾಗಿಯೂ ಒಳ್ಳೆಯದಲ್ಲ. ಏನೇ ಆಗಲಿ, ಅನುಸರಿಸದೇ ಇರುವುದಕ್ಕೆ ಹೋಲಿಸಿದರೆ ಇದು ಬಹಳ ಕೆಟ್ಟದ್ದೇನಲ್ಲ ಎಂದು ನಾನು ಹೇಳುತ್ತೇನೆ; ಇದು ಉತ್ತಮವಾದುದು; ಕೊನೆಯ ಪಕ್ಷ ಭಯದಿಂದಲಾದರೂ ಅನುಸರಿಸುತ್ತೇವೆ.

ಇದು ಧ್ಯಾನದ ವಿಷಯದಲ್ಲೂ ಸತ್ಯ. ಧ್ಯಾನ ಮಾಡುವುದನ್ನು ನಾವು ಪ್ರೀತಿಸಬೇಕು. ಬೇರೆಯವರ ಒತ್ತಾಯದ ಮೇರೆಗೆ ಮಾಡಬಾರದು. ನಮಗೆ ಸಮಸ್ಯೆಗಳಿದ್ದಾಗ ಅವುಗಳಿಂದ ಪಾರಾಗಲು ನಾವು ನಿಯತವಾಗಿ ಧ್ಯಾನ ಮಾಡುತ್ತೇವೆ. ಸಮಸ್ಯೆಯಿಂದ ಪಾರಾದಾಗ ಏನಾಗುತ್ತದೆ ಎಂದು ನಮಗೆ ಗೊತ್ತು. ಆಗ ನಮಗೆ ಧ್ಯಾನ ಮಾಡದಿರಲು ಸಾವಿರಾರು ಕಾರಣಗಳಿರುತ್ತವೆ.

ಶಿಸ್ತು ಒಂದುಸಲದ ಅಭ್ಯಾಸವಲ್ಲ; ಈ ದಿನ ಅದನ್ನು ಅನುಸರಿಸುತ್ತೇವೆ, ನಾಳೆ ಅನುಸರಿಸುವುದಿಲ್ಲ. ಶಿಸ್ತು ಒಂದು ರೀತಿಯ ಜೀವನ ಶೈಲಿ. ನಾವು ಅದನ್ನು ಪ್ರತಿದಿನ ಪಾಲಿಸಬೇಕು.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಪ್ರಪಂಚದೆಲ್ಲೆಡೆ ಲಕ್ಷಾಂತರ ಮಕ್ಕಳು ಹಾಗೂ ಸಾವಿರಾರು ಜನರು ನಿಯತವಾಗಿ ಲೈಟ್ ಚಾನಲ್ ಮಾಡುತ್ತಾರೆ. ಲೈಟ್ ಚಾನಲ್ ಮಾಡುತ್ತಿರುವ ವ್ಯಕ್ತಿಗಳು ತಮ್ಮ ಜೀವನದಲ್ಲಿ ಪ್ರಯೋಜನಗಳನ್ನು ಅನುಭವಿಸುತ್ತಿದ್ದಾರೆ. ಶಾಲೆಯ ಆವರಣ ಹಾಗೂ ಸುತ್ತ ಮುತ್ತಲೂ ಇದರ ಪ್ರಭಾವವನ್ನು ಕಾಣಬಹುದಾಗಿದೆ. ಲೈಟ್ ಚಾನಲಿಂಗ್‌ನಿಂದಲೇ ಉಂಟಾದ ಪರಿಣಾಮವೆಂದು ನಿಖರವಾಗಿ ಗುರುತಿಸಲಾಗದಿದ್ದರೂ ಇದರ ಪರಿಣಾಮ ಸಮಸ್ತ ವಿಶ್ವದ ಮೇಲೂ ಆಗಿದೆ. ಅದನ್ನು ಅಳತೆ ಮಾಡಲು ಸಾಧ್ಯವಿಲ್ಲ; ಅದು ಮುಖ್ಯವೂ ಅಲ್ಲ.

ಸಕಾರಾತ್ಮಕ ಶಕ್ತಿಗಳಿಗೆ ಸಹಾಯ ಮಾಡಲು ಅನೇಕ ಮಾಸ್ಟರ್‌ಗಳು ಉನ್ನತ ಮಟ್ಟಗಳಲ್ಲಿ ಕೆಲಸ ಮಾಡುತ್ತಿದ್ದಾರೆ, ಅದ್ಭುತವಾದ ಚೈತನ್ಯಗಳನ್ನು ಚಾನಲ್ ಮಾಡುತ್ತಿದ್ದಾರೆ, ಎಂದು ಗುರೂಜಿ ಕೃಷ್ಣಾನಂದರವರು ನಮಗೆ ವಿವರಿಸಿದ್ದರು. ಈ ಶಾಂತಿ ಪ್ರಯತ್ನಗಳಿಗೆ ವಿಶ್ವದೆಲ್ಲೆಡೆ ಹಲವಾರು ಧ್ಯಾನಿಗಳು ಸದ್ದಿಲ್ಲದೆ ನೆರವಾಗುತ್ತಿದ್ದಾರೆ. ನಾವೆಲ್ಲರೂ ಒಂದೇ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಈ ಹೊಸ ಶೈಕ್ಷಣಿಕ ವರ್ಷದಲ್ಲಿ ಲೈಟ್ ಚಾನಲಿಂಗ್ ಕೆಲಸಕ್ಕೆ ಒಂದು ಒಳ್ಳೆಯ ಆರಂಭ ದೊರೆಯಿತು. ಪ್ರತಿ ವರ್ಷದಂತೆ ಶಾಲೆಗಳಿಂದ ಅಗಾಧವಾದ ಪ್ರತಿಕ್ರಿಯೆ ದೊರೆಯಿತು ಹಾಗೂ ಚಾನಲಿಂಗ್‌ಗೆ ಕೂಡಲೆ ಒಪ್ಪಿಗೆ ದೊರೆಯಿತು.

ಅನೇಕ ಶಾಲಾ ಅಧಿಕಾರಿಗಳು ತಮ್ಮ ಮೊದಲ ದಿನವನ್ನು ಲೈಟ್ ಚಾನಲಿಂಗ್‌ನಿಂದ ಪ್ರಾರಂಭಿಸಲು ನಮ್ಮ ಕಾರ್ಯಕರ್ತರನ್ನು ಆಹ್ವಾನಿಸಿದರು. ಆರಂಭದ ದಿನದಂದು ಮಕ್ಕಳನ್ನು ಲೈಟ್ ಚಾನಲಿಂಗ್ ಸೆಷನ್‌ಗೆ ಆಹ್ವಾನಿಸಲು ಶಾಲೆಯೊಂದು ತಮ್ಮ ಶಾಲೆಯ ಗೇಟ್ ಮೇಲೆ ಒಂದು ಚಿಕ್ಕ ಬ್ಯಾನರನ್ನು ಹಾಕಿದ್ದನ್ನು ನೋಡಿ ಬಹಳ ಸಂತೋಷವಾಯಿತು. ಲೈಟ್ ಚಾನಲಿಂಗ್ ಕೆಲಸಕ್ಕೆ ಎಂತಹ ಅಸಾಧಾರಣ ಉತ್ತೇಜನ! ಮತ್ತೊಂದು ಶಾಲೆಯಲ್ಲಿ ಲೈಟ್ ಚಾನಲಿಂಗ್ ಸೆಷನ್ ಮುಗಿದನಂತರ, ತಮ್ಮ ಪ್ರೀತಿ ಮತ್ತು ಕೃತಜ್ಞತೆಯ ಸಂಕೇತವಾಗಿ ನಮ್ಮ ಕಾರ್ಯಕರ್ತರಿಗೆ ಗುಲಾಬಿ ಹೂಗಳನ್ನು ನೀಡಿದರು.

ಎಲ್ಲಾ ಶಾಲಾ ಅಧಿಕಾರಿಗಳಿಗೆ ಅವರ ಬೇಷರತ್ತಿನ ಬೆಂಬಲಕ್ಕಾಗಿ ನಾವು ವಂದನೆಗಳನ್ನು ಅರ್ಪಿಸುತ್ತೇವೆ. ಈ ವಿಶ್ವವ್ಯಾಪಕ ಕೆಲಸವನ್ನು ಮುಂದುವರೆಸಿಕೊಂಡು ಹೋಗಲು ಅವರ ಉತ್ತೇಜನ ನಮಗೆ ಸ್ಫೂರ್ತಿ ನೀಡುತ್ತದೆ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.
ಫೋನ್: (080) 2846 5280, 99000 75280 (10am to 5pm), ಇ–ಮೇಲ್: info@lightagemasters.com
website : www.lightagemasters.com, www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಾಗಿಲ್ಲ.

### ಬೆಂಗಳೂರು

**ಸೋಮವಾರದಿಂದ ಶುಕ್ರವಾರದವರೆಗೆ (ಸಂಜೆ 7 - 7.15)**
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ
☎ 9084121545 ಶ್ರೀ ಕೆ. ಚಂದ್ರಶೇಖರ್

**ಸೋಮವಾರ (ಸಂಜೆ 6.30 - 7)**
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಬುಧವಾರ (ಸಂಜೆ 6.30 - 7)**
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಶುಕ್ರವಾರ (ಸಂಜೆ 6.30 - 7)**
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ ಭೋಸೆಕರ್

**ಶುಕ್ರವಾರ (ಮಧ್ಯಾಹ್ನ 12.00)**
ಸಿದ್ಧಿ ವಿನಾಯಕ ದೇವಸ್ಥಾನ, 59/1,
ಹಚಿನ್ಸ್ ರಸ್ತೆ, 3ನೇ ಅಡ್ಡರಸ್ತೆ, ಕೂಕ್ ಟೌನ್
☎ 9980205803 ಶ್ರೀಮತಿ ನಿರ್ಮಲ ಬಾಲ

**ಶನಿವಾರ (ಸಂಜೆ 6.30 - 7)**
ಬಲಮುರಿ ಮಹಾಗಣಪತಿ, ಶ್ರೀ ರಾಜರಾಜೇಶ್ವರಿ ಮತ್ತು ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನ,
8ನೇ ಅಡ್ಡರಸ್ತೆ, ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸ್ಯಾಟ್‌ಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ-ಮೇಲ್ info@lightagemasters.com ಗೆ ಬರೆಯಿರಿ.



ಬೆಂಗಳೂರಿನ ಜಯನಗರದಲ್ಲಿರುವ ಲೈಟ್ ಚಾನಲಿಂಗ್ ಕೇಂದ್ರದ ಸದಸ್ಯರು ಅದರ 7ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಏಪ್ರಿಲ್ 27, 2018ರಂದು ಲೈಟ್ ಚಾನಲ್ ಮಾಡುತ್ತಿರುವುದು

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಯೋಗವೆಂದರೆ, ದೇವರೊಂದಿಗೆ ಶೃತಿಗೊಳ್ಳುವುದು ಹಾಗೂ ಎಲ್ಲಾ ಇಪ್ಪತ್ನಾಲ್ಕು ಗಂಟೆಗಳೂ ಹಾಗೂ ಜೀವನವಿಡೀ ದೈವೀ ಪ್ರಜ್ಞೆಯಲ್ಲಿರುವುದು.
- ನಾವು ಈ ಜೀವನವನ್ನು ಗಂಭೀರವಾಗಿ ಪರಿಗಣಿಸಿದಾಗ ಬೇಕಾಗುವ ಎರಡು ಬಹಳ ಮುಖ್ಯವಾದ ಅಂಶಗಳೆಂದರೆ ಪ್ರೀತಿ ಮತ್ತು ಸ್ವಾತಂತ್ರ್ಯ.
- ಪ್ರಳಯ ವಿನಾಶವಲ್ಲ, ಆದರೆ ಬದಲಾವಣೆ. ಇದು ಭಾವನೆಗಳನ್ನು ಹಾಗೂ ಆಲೋಚನೆಗಳನ್ನು ಉದಾತ್ತಗೊಳಿಸುವ ಒಂದು ಪ್ರಕ್ರಿಯೆ. ಪ್ರಳಯ ಒಂದು ಮಂಥನದ ಪ್ರಕ್ರಿಯೆ. ಇದು ಉನ್ನತ ಪ್ರಜ್ಞೆಗೆ ಸ್ಥಿತ್ಯಂತರಗೊಳ್ಳುವುದಾಗಿದೆ. ಇದು ಪರಿವರ್ತನೆಗೊಳ್ಳುವುದಾಗಿದೆ.
- ನಾವು ಯಾವಾಗಲೂ ವಿಶಾಲವಾಗಿ ಯೋಚಿಸಬೇಕು, ಭಾವಿಸಬೇಕು ಹಾಗೂ ವರ್ತಿಸಬೇಕು. ಎಲ್ಲಾ ಮಟ್ಟಗಳಲ್ಲೂ ವಿಶಾಲತೆ ಹಾಗೂ ದೊಡ್ಡತನವಿರಬೇಕು.
- ನಮ್ಮ ವ್ಯಕ್ತಿತ್ವದ ಪರಿವರ್ತನೆಗಾಗಿ ನಿಜವಾದ ಪ್ರಯತ್ನಗಳನ್ನು ಮಾಡಲು ಪ್ರಾರಂಭಿಸಿದಾಗ, ಜ್ಞಾನ, ಮಾರ್ಗದರ್ಶನ ಹಾಗೂ ಚೈತನ್ಯಗಳ ರೂಪದಲ್ಲಿ ಎಲ್ಲಾ ಸಹಾಯವು ಋಷಿಗಳಿಂದ ಬರುತ್ತದೆ.
- ಭವಿಷ್ಯವಿಲ್ಲದ ಮತ್ತು ಭರವಸೆಯಿಲ್ಲದ ಸ್ಥಿತಿಗೆ ಪ್ರತಿ ಸಲವೂ ಮನುಷ್ಯನು ತಳ್ಳಲ್ಪಟ್ಟಾಗ, ಜೀವ ಶಕ್ತಿಗಳು ಪ್ರೀತಿ ಮತ್ತು ಭರವಸೆಯ ದೀಪವನ್ನು ಹೊತ್ತಿಸುತ್ತವೆ. ಕ್ರಮೇಣವಾಗಿ ಜೀವನ ತನ್ನನ್ನು ತಾನು ಸಮರ್ಥಿಸಿಕೊಂಡು ವಿನಾಶಕಾರಿ ಶಕ್ತಿಗಳನ್ನು ನಾಶಗೊಳಿಸುತ್ತದೆ.
- ಪ್ರೀತಿ, ಕರುಣೆ, ಅಹಿಂಸೆ ಹಾಗೂ ಪ್ರಗತಿಯಲ್ಲಿರುವ ವಿಕಾಸದ ಪ್ರಕ್ರಿಯೆಗಳಿಗೆ ಸಹಾಯ ಮಾಡುವಂತಹದೆಲ್ಲವೂ ನಮ್ಮ ಸಹಜಗುಣಗಳಾಗಿವೆ.

–ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5352 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 28.48 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | : | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | : | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಬೆಳಕಿನಲ್ಲಿ ಪಯಣ: 10 ವರ್ಷಗಳ ಕ್ರಾಂತಿ

ಮನೋಜ್ ಕುಮಾರ್ ಚೋಪ್ರ; ಅನು: ಶ್ರೀದೇವಿ

ನಾವು 'ವಿಶ್ವ ಲೈಟ್ ಚಾನಲ್ಸ್ ಸಂಚಲನವನ್ನು' ಯಶಸ್ವಿಯಾಗಿ 10 ವರ್ಷಗಳು ಪೂರೈಸುತ್ತಿದ್ದೇವೆ. ಇದು ಒಂದು ಒಳ್ಳೆಯ ಪ್ರಾರಂಭ ಎಂದು ನನಗನಿಸುತ್ತದೆ. ಆಧ್ಯಾತ್ಮಿಕ ಕ್ರಾಂತಿಗಳು ಸುಲಭ ಸಾಧ್ಯವಲ್ಲ. ಆದರೆ ಇವು ಅಂತಿಮ ಕ್ರಾಂತಿಗಳಾಗಿದ್ದು ಯಾವಾಗಲೂ ತಮ್ಮ ಗುರಿಯನ್ನು ಮುಟ್ಟುತ್ತವೆ. ಮೇ 18, 2008ರಂದು ಗುರೂಜಿ ಕೃಷ್ಣಾನಂದರವರಿಂದ ಪ್ರಾರಂಭವಾದ ಲೈಟ್ ಚಾನಲಿಂಗ್ ಅಂತಹ ಒಂದು ಅನನ್ಯವಾದ ವಿಶ್ವ ಸಂಚಲನವಾಗಿದೆ. ಹೊಸ ಯುಗವನ್ನು ಸ್ಥಾಪಿಸುವುದು ಈ ಸಂಚಲನದ ಉದ್ದೇಶವಾಗಿತ್ತು.

ಇದು ಒಂದು ಅದ್ಭುತವಾದ ಪಯಣ. ಸ್ವಲ್ಪ ಹಿಂಜರಿಕೆಯಿಂದ ಶಾಲೆಗಳಿಗೆ ಭೇಟಿ ನೀಡುವುದರೊಂದಿಗೆ ಈ ಪಯಣ ಆರಂಭವಾಯಿತು. ಆದರೆ ನಿಧಾನವಾಗಿ ಬೆಳಕು ಅದರ ದಾರಿಯನ್ನು ಮಾಡಿಕೊಂಡಿತು ಹಾಗೂ ಶಾಲೆಗಳಿಂದ ಅಗಾಧವಾದ ಪ್ರತಿಕ್ರಿಯೆ ದೊರೆಯಿತು. ಮಕ್ಕಳು ಈ ಪ್ರಪಂಚಕ್ಕೆ ದಾರಿ ತೋರಿಸಿದರು. ಅವರ ಮುಗ್ಧ ಹೃದಯಗಳು ಬೆಳಕನ್ನು ಸಂಪೂರ್ಣವಾಗಿ ಸ್ವೀಕರಿಸಿವೆ. ಅನೇಕ ಮಕ್ಕಳು ಮತ್ತು ಶಿಕ್ಷಕರು ತಮ್ಮ ಮೊದಲ ಲೈಟ್ ಚಾನಲಿಂಗ್ ಸೆಷನ್‌ನಲ್ಲೇ ಬೆಳಕಿನ ಅನುಭವವನ್ನು ಪಡೆದಿದ್ದಾರೆ. ಶಾಲೆಗಳು ಈ ತಂತ್ರವನ್ನು ಪ್ರೀತಿಸಲು ಪ್ರಾರಂಭಿಸಿವೆ. ಮಕ್ಕಳ ಮೇಲೆ ಲೈಟ್ ಚಾನಲಿಂಗ್ ಮಹತ್ತರವಾದ ಪರಿಣಾಮ ಬೀರಿರುವುದನ್ನು ಕಂಡಿದ್ದೇವೆ. ತಮ್ಮ ಶಾಲೆಗಳಲ್ಲಿ ಅನೇಕ ಬದಲಾವಣೆಗಳನ್ನು ಶಾಲಾ ಅಧಿಕಾರಿಗಳು ಕಂಡಿದ್ದಾರೆ; ಮಕ್ಕಳ ನಡವಳಿಕೆಯಲ್ಲಿ ಬದಲಾವಣೆಗಳಾಗಿವೆ ಹಾಗೂ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ತೋರಿದ್ದಾರೆ. ಲೈಟ್ ಚಾನಲ್ ಮಾಡಿದಮೇಲೆ ಮಕ್ಕಳು ಹೆಚ್ಚು ಶಿಸ್ತಿನಿಂದ ಕೂಡಿದವರಾಗಿದ್ದಾರೆ. ಮಕ್ಕಳು ನಿಯತವಾಗಿ ಲೈಟ್ ಚಾನಲ್ ಮಾಡುತ್ತಿರುವ ಶಾಲೆಗಳು ಒಟ್ಟಾರೆ ಬೆಳವಣಿಗೆಯನ್ನು ಕಂಡಿವೆ ಹಾಗೂ ತಮ್ಮ ಸುತ್ತಮುತ್ತಲಿನ ಜೀವನದಲ್ಲಿ ಕೂಡ ಒಂದು ತರಹದ ಸುಧಾರಣೆಯಾಗಿರುವುದನ್ನು ಕಂಡಿವೆ.

ವರ್ಷದಿಂದ ವರ್ಷಕ್ಕೆ ನಮ್ಮ ಕಾರ್ಯಕರ್ತರು ಹೆಚ್ಚು ಆತ್ಮವಿಶ್ವಾಸ ಹಾಗೂ ದೃಢನಂಬಿಕೆಯಿಂದ ಮುಂದೆ ಸಾಗಲು ಪ್ರಾರಂಭಿಸಿದ್ದಾರೆ. ಶಾಲೆಗಳ ಪ್ರೋತ್ಸಾಹ ನಮ್ಮ ಕಾರ್ಯಕರ್ತರನ್ನು ಲೈಟ್ ಚಾನಲಿಂಗ್‌ಗಾಗಿ ಹೊಸ ಪ್ರದೇಶಗಳಲ್ಲಿರುವ ಶಾಲೆಗಳನ್ನು ಭೇಟಿ ಮಾಡಲು ಪ್ರೇರೇಪಿಸಿದೆ. ಲೈಟ್ ಚಾನಲಿಂಗ್‌ನಲ್ಲಿ ಅವರಿಗಿರುವ ಸಂಪೂರ್ಣ ನಂಬಿಕೆಯು ಈ ಸಂಚಲನವು ನಂಬಲಾಗದಷ್ಟು ಆವೇಗವನ್ನು ಪಡೆಯಲು ಸಹಾಯಮಾಡಿದೆ. ಅಲ್ಪಾವಧಿಯಲ್ಲಿ, ಈ ತಂಡ ಸುಮಾರು 30 ಲಕ್ಷ ಮಕ್ಕಳು ಮತ್ತು ದೊಡ್ಡವರಿಗೆ ಲೈಟ್ ಚಾನಲ್ ಮಾಡುವುದನ್ನು ಕಲಿಸಿದೆ. ಬೇರೆ ಬೇರೆ ಸಾಮಾಜಿಕ ಮಾಧ್ಯಮಗಳ ವೇದಿಕೆಗಳ ಮೂಲಕ ಲೈಟ್ ಚಾನಲಿಂಗ್ ಪ್ರಪಂಚದ ಪ್ರತಿಯೊಂದು ಮೂಲೆಯನ್ನೂ ತಲುಪುತ್ತಿದೆ.

ಬೆಳಕಿನಲ್ಲಿ ಸಕಾರಾತ್ಮಕವಾದುದೆಲ್ಲವೂ ಇವೆ; ಇದರಲ್ಲಿ ಪ್ರೀತಿ, ಶಾಂತಿ, ವಿವೇಕ, ಹೀಲಿಂಗ್ ಶಕ್ತಿ ಹಾಗೂ ಇನ್ನೂ ಹೆಚ್ಚಿನ ಅಂಶಗಳಿವೆ. ಎಲ್ಲದಕ್ಕಿಂತ ಹೆಚ್ಚಾಗಿ, ಅದು ಆಯ್ಕೆಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ನೀಡುತ್ತದೆ. ನಾವು ಬೆಳಕನ್ನು ಆಯ್ಕೆ ಮಾಡಿಕೊಂಡರೆ, ನಮಗೆ ಎಲ್ಲಾ ಪ್ರಯೋಜನಗಳು ಸಿಗುತ್ತವೆ ಹಾಗೂ ನಾವು ಹೊಸ ಮನುಷ್ಯರಾಗಿ ಬದಲಾಗುತ್ತೇವೆ. ನಾವು ಬೆಳಕನ್ನು ಆಯ್ಕೆಮಾಡಿಕೊಳ್ಳದಿದ್ದರೆ, ಅದು ತನ್ನನ್ನು ತಾನು ಬಲವಂತವಾಗಿ ನಮ್ಮ ಮೇಲೆ ಹೇರುವುದಿಲ್ಲ. ಅದು ಮೇಲಿಂದ ಮೇಲೆ ಅವಕಾಶಗಳನ್ನು ಕೊಡುತ್ತಾ ಹೋಗುತ್ತದೆ. ನಮ್ಮಲ್ಲಿ ಬಹುಪಾಲು ಜನರು ಬೆಳಕನ್ನು ಆಯ್ಕೆಮಾಡಿಕೊಂಡರೆ, ಆಗ, ಯುದ್ಧಗಳಿರುವುದಿಲ್ಲ, ಪ್ರಕೃತಿ ವಿಕೋಪಗಳಿರುವುದಿಲ್ಲ ಹಾಗೂ ಅಹಿಂಸೆಯಿರುವುದಿಲ್ಲ. ಸಂಪೂರ್ಣವಾದ ಶಾಂತಿ ಹಾಗೂ ಸೌಹಾರ್ದತೆಯಿರುತ್ತದೆ.

ಬೆಳಕನ್ನು ಸ್ವೀಕರಿಸೋಣ ಹಾಗೂ ನಮಗಾಗಿ ಕಾಯುತ್ತಿರುವ ಹೊಸ ಚೈತನ್ಯಗಳನ್ನು ಸ್ವಾಗತಿಸೋಣ. ಪ್ರೀತಿ ಮತ್ತು ಶಾಂತಿಯಿಂದ ತುಂಬಿದ ಹೊಸ ಪ್ರಪಂಚವನ್ನು ಬೆಳಕಿನೊಂದಿಗೆ ನಿರ್ಮಿಸೋಣ. ಹೊಸಯುಗ ಆರಂಭವಾಗುವವರೆಗೆ ಬೆಳಕನ್ನು ಚಾನಲ್ ಮಾಡುವುದನ್ನು ಮುಂದುವರೆಸೋಣ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಯಾವುದಾದರೊಂದು ಲೈಟ್ ಚಾನಲಿಂಗ್ ಕೇಂದ್ರದಲ್ಲಿ ವಾರಕ್ಕೆ ಒಮ್ಮೆ ಲೈಟ್ ಚಾನಲ್ ಮಾಡಲು ದಯವಿಟ್ಟು ನಮ್ಮ ಜೊತೆಗೂಡಿ ಹಾಗೂ ಶಾಂತಿ ಮತ್ತು ಪ್ರೀತಿಯ ಕಂಪನಗಳನ್ನು ಹರಡಲು ಮತ್ತು ಬಲಗೊಳಿಸಲು ಸಹಾಯ ಮಾಡಿ. ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿ ಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳ ಬಹುದು.

### ಸೋಲಾಪೂರ್

**ಸೋಮವಾರ ಮತ್ತು ಗುರುವಾರ (ಸಂಜೆ 7 - 7.15)**

ಬಾಲಗಣೇಶ್ ಮಂದಿರ, ಬುಶರ್ ಪೇಠ್, ಮೊಹೋಲ್

☎ 09860967066 ಶ್ರೀ ವಿವೇಕಾನಂದ ಸ್ವಾಮಿ

☎ 09970800279 ಶ್ರೀಮತಿ ಸ್ವರೂಪ ಸ್ವಾಮಿ

### ಮೀರಜ್

**ಗುರುವಾರ (ಸಂಜೆ 7.45)**

ಶ್ರೀ ಶಿವರುದ್ರ ಬಿ. ಬೆಲಗನ್ವಿ,
A-Gat Plot No-135,
C/o ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ

☎ 9822421463 ಶ್ರೀ ಮಹಾಜನ್

### ಚೆನ್ನೈ

**ಶನಿವಾರ (ಬೆಳಿಗ್ಗೆ 10 - 10.30)**

ನಂ. 481, ಸಾಯಿಪ್ರೇಮ್, 19ನೇ ರಸ್ತೆ, 4ನೇ ಸೆಕ್ಟರ್, ಕೆ. ಕೆ. ನಗರ

☎ 9444880409 ಶ್ರೀಮತಿ ರಾಜಲಕ್ಷ್ಮಿ ಆರ್


### ಪುಣೆ

**ಶನಿವಾರ (ಸಂಜೆ 7 - 7.30)**

3-B, ಕಪಿಲ ಹೌಸಿಂಗ್ ಸೊಸೈಟಿ, ಗೋಖಲೆನಗರ

☎ 9011038169 ಶ್ರೀ ಆಶುತೋಶ್ ನವನ್‌ಗುಲ್

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



# ಅನುಭವಗಳು

ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ

ವಿಶ್ವ ಚಾನಲ್ಸ್ ದಿನದಂದು, ತುಮಕೂರು ನಗರದ ಚೇತನ ವಿದ್ಯಾ ಮಂದಿರ ಹೈಸ್ಕೂಲ್‌ನಲ್ಲಿ ಲೈಟ್ ಚಾನಲಿಂಗ್ ಸೆಷನ್ ಆದ ನಂತರ ಶಾಲೆಯ ಶಿಕ್ಷಕಿ ಸುಮಂಗಳರವರು ಕಣ್ಣೀರಿನೊಂದಿಗೆ ಈ ರೀತಿ ಹೇಳಿದರು, "ಈಗ ನೀವು ನಡೆಸಿಕೊಟ್ಟ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ನಾನು ಭಾಗವಹಿಸಿದ್ದೆ. ಪವಾಡದಂತಹದ್ದೇನೋ ನಡೆಯಿತು, ನಾನು ನಿಯತವಾಗಿ ಇದನ್ನು ಅಭ್ಯಾಸ ಮಾಡುತ್ತೇನೆ". ಮುಂದುವರಿಸುತ್ತಾ ಆಕೆ ಹೇಳಿದರು, "ಆರು ತಿಂಗಳುಗಳ ಹಿಂದೆ ನಾನು ಬಸ್ಸಿನಿಂದ ಕೆಳಗೆ ಬಿದ್ದೆ, ನನ್ನ ಮಂಡಿಗೆ ಗಾಯವಾಗಿತ್ತು. ಬಹಳ ನೋವಿತ್ತು. ಔಷಧಿಯನ್ನು ತೆಗೆದುಕೊಳ್ಳುತ್ತಿದ್ದೆ, ಸ್ವಲ್ಪ ಚೇತರಿಸಿಕೊಂಡೆ, ಆದರೆ ನೋವು ಸಂಪೂರ್ಣವಾಗಿ ಹೋಗಿರಲಿಲ್ಲ ಹಾಗೂ ನೇರವಾಗಿ ನಡೆಯುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ನೀವು ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಹೀಲಿಂಗ್ ಬಗ್ಗೆ ಹೇಳುತ್ತಿದ್ದಾಗ, ನೋವಿರುವ ಜಾಗಕ್ಕೆ ಹೆಚ್ಚಿನ ಬೆಳಕು ಹೋದಂತೆ ಹಾಗೂ ಅದು ನನಗೆ ಸಹಾಯ ಮಾಡುತ್ತಿರುವಂತೆ ಕಲ್ಪಿಸಿಕೊಂಡೆ. ಈ ಆರು ತಿಂಗಳಲ್ಲಿ ಮೊದಲ ಸಲ ನನಗೆ ನೇರವಾಗಿ ನಡೆಯುವುದಕ್ಕೆ ಸಾಧ್ಯವಾಯಿತು. ಅಲ್ಲಿಂದ ನಾನು ನೇರವಾಗಿ ನಿಮ್ಮ ಬಳಿಗೆ ಬರುತ್ತಿದ್ದೇನೆ!" ಇದನ್ನು ಕೇಳಿ ನಾನು ಮೂಕವಿಸ್ಮಿತನಾದೆ. ಬೆಳಕಿಗೆ ಕೃತಜ್ಞತೆಗಳನ್ನು ತಿಳಿಸಿ, ಮುಂದಿನ ಶಾಲೆಗೆ ಹೋದೆ.

ಮುಂದಿನ ಶಾಲೆಯಲ್ಲಿ, ಲೈಟ್ ಚಾನಲಿಂಗ್ ಸೆಷನ್ ನಡೆಸಲು ಸ್ವಲ್ಪ ನಿರಾಕರಣೆಯಿತ್ತು. ಅಂಜಲಿ ಮೇಡಮ್ ಅವರು ಲೈಟ್ ಚಾನಲ್ ಮಾಡುವುದರ ಪ್ರಯೋಜನ ಮತ್ತು ಅದರ ಪ್ರಾಮುಖ್ಯತೆಯನ್ನು ಅವರಿಗೆ ಅರ್ಥಮಾಡಿಸಲು ಪ್ರಯತ್ನಿಸುತ್ತಿದ್ದರು. ಅಲ್ಲಿ ನನಗೆ ಯಾವ ಪಾತ್ರವೂ ಇಲ್ಲವೆಂದು ಮನಗಂಡ ನಾನು ಲೈಟ್ ಚಾನಲ್ ಮಾಡಲು ಪ್ರಾರಂಭಿಸಿದೆ. ನಾನು ಲೈಟ್ ಚಾನಲ್ ಮಾಡುವುದನ್ನು ಮುಗಿಸುತ್ತಿದ್ದಂತೆ, ಆಡಳಿತ ಮಂಡಳಿಯವರ ನಿರ್ಧಾರವನ್ನು ತಿಳಿಸಬೇಕಾದವರು ಬಂದು ಆಡಳಿತ ಮಂಡಳಿಯ ಯಾರೊಬ್ಬರನ್ನೂ ಸಂಪರ್ಕಿಸುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ತಾನು ಸ್ವಂತ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ತಿಳಿಸಿದರು. ತಕ್ಷಣವೇ ಅವರ ಫೋನ್ ಮೊಳಗಿತು. ಆಡಳಿತ ಮಂಡಳಿಯ ಸದಸ್ಯರೊಬ್ಬರು ಅನುಮತಿ ನೀಡಲು ತಿಳಿಸಿದರು. ಕೆಲವು ಕ್ಷಣಗಳಲ್ಲಿ ಅಲ್ಲಿನ ವಾತಾವರಣವೇ ಬದಲಾಯಿತು. ಲೈಟ್ ಚಾನಲಿಂಗ್ ಸೆಷನ್ ನಡೆಸುವುದಕ್ಕೆ ನಮಗೆ ಸಾಧ್ಯವಾಯಿತು, ಎಲ್ಲಾ ಮಕ್ಕಳು ಅಚ್ಚುಕಟ್ಟಾಗಿ ಭಾಗವಹಿಸಿದರು.

–ಗುರುರಾಜ್ ಕಾನಡೆ, ಕಾರ್ಯಕರ್ತ

ವಿಶ್ವ ಚಾನಲ್ಸ್ ದಿನದಂದು, ಸೆಂಟ್ ಜೋಸೆಫ್ ಶಾಲೆಯಲ್ಲಿ ಲೈಟ್ ಚಾನಲಿಂಗ್ ಸೆಷನ್ ಸಮಯದಲ್ಲಿ, "ನಿಮ್ಮ ಇಡೀ ಶಾಲೆಗೆ ಬೆಳಕು ಹರಡುತ್ತಿದೆ ಎಂದು ಭಾವಿಸಿರಿ", ಎಂದು ಹೇಳಿದಾಗ, ತಕ್ಷಣ ನನ್ನೊಳಗೆ ಮತ್ತು ನನ್ನ ಸುತ್ತಲೂ ಬೆಳಕಿನ ಪ್ರವಾಹದ ಅನುಭವವಾಯಿತು. ಅದು ನಂಬಲಾಗದಷ್ಟು ಸ್ಪಷ್ಟವಾಗಿ ವ್ಯಕ್ತವಾಗುತ್ತಿತ್ತು. ಇಡೀ ಆವರಣ ಬೆಳಕಿನ ಪ್ರವಾಹದಿಂದ ತುಂಬಿತ್ತು. ಆಗ, ನಾವು ಲೈಟ್ ಚಾನಲಿಂಗ್ ತಂತ್ರವನ್ನು ಅಭ್ಯಾಸ ಮಾಡುವಾಗ ಬೆಳಕು ಹೇಗೆ ಹರಡುತ್ತದೆ ಎನ್ನುವುದನ್ನು ನೇರವಾಗಿ ಅನುಭವಿಸಿದೆ.

–ಶ್ರುತಿ ಸುಧಾಕರ್, ಕಾರ್ಯಕರ್ತೆ

ವಿಶ್ವ ಚಾನಲ್ಸ್ ದಿನದಂದು, ಲೈಟ್ ಚಾನಲಿಂಗ್ ಸೆಷನ್‌ಅನ್ನು ನಡೆಸಲು ಹೋದ ಮೊದಲ ಶಾಲೆಯಲ್ಲಿ, ಅವರು ಪ್ರಾರ್ಥನೆ ಮಾಡಿ ಸುಭಾಷಿತವನ್ನು ಓದುವುದರೊಂದಿಗೆ ತಮ್ಮ ದಿನವನ್ನು ಪ್ರಾರಂಭಿಸುತ್ತಾರೆ. "ಬೆಳಕನ್ನು ಅನುಸರಿಸಿ, ನೀವು ಎಂದಿಗೂ ಕತ್ತಲನ್ನು ಕಾಣುವುದಿಲ್ಲ", ಎನ್ನುವುದು ಆ ದಿನದ ಸುಭಾಷಿತವಾಗಿತ್ತು. ಇದನ್ನು ಮುಖ್ಯೋಪಾಧ್ಯಾಯರು ಓದಿದ ನಂತರ, "ಇವತ್ತಿನ ವಾರ್ತಾಪತ್ರಿಕೆಯ ಸುಭಾಷಿತವೂ ಬೆಳಕಿನ ಬಗ್ಗೆಯೇ ಇದೆ ಮತ್ತು ನೀವು ಸಹ ಅದರ ಬಗ್ಗೆಯೇ ಹೇಳುತ್ತಿದ್ದೀರಿ, ಇದು ಹೇಗೆ? ನೀವು ನಮಗೆಲ್ಲರಿಗೂ ಸುಭಾಷಿತದ ವಿಷಯವನ್ನೇ ವಿವರಿಸಿ ಹೇಳುತ್ತಿರುವುದು ವಿಶೇಷವೆನಿಸುತ್ತದೆ", ಎಂದು ಆಶ್ಚರ್ಯದಿಂದ ಕೇಳಿದರು. ಇದನ್ನು ಕೇಳಿ ನನಗೆ ತುಂಬಾ ಸಂತೋಷ ವಾಯಿತು. ಸೆಷನ್ ಸಹ ಚೆನ್ನಾಗಿ ನಡೆಯಿತು.

ಮತ್ತೊಂದು ಶಾಲೆಯಲ್ಲಿ, "ಲೈಟ್ ಚಾನಲಿಂಗ್ ಅಭ್ಯಾಸ ಮಾಡುತ್ತಿದ್ದಾಗ, ಚೈತನ್ಯಗಳ ಅನುಭವವಾಗುತ್ತಿತ್ತು. ನಾನು ಬೇರೊಂದು ಪ್ರಪಂಚವನ್ನು ಪ್ರವೇಶ ಮಾಡಿದಂತೆ ಭಾಸವಾಯಿತು, ನನಗೆ ಈ ಅನುಭವವನ್ನು ಪದಗಳಿಂದ ವಿವರಿಸಿ ಹೇಳುವುದಕ್ಕೆ ಸಾಧ್ಯವಾಗುತ್ತಿಲ್ಲ", ಎಂದು ಮುಖ್ಯೋಪಾಧ್ಯಾಯರು ಲೈಟ್ ಚಾನಲಿಂಗ್ ಸೆಷನ್ ಮುಗಿದ ನಂತರ ಹೇಳಿದರು.

ಬೇರೊಂದು ಶಾಲೆಯಲ್ಲಿ, ವಿಜ್ಞಾನ ಪ್ರದರ್ಶನ ನಡೆಯುತ್ತಿತ್ತು. ಆ ಕಾರಣದಿಂದ ಲೈಟ್ ಚಾನಲಿಂಗ್ ಸೆಷನ್ ನಡೆಸುವುದಕ್ಕೆ ಅನುಮತಿ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಅವರ ಮನ ಒಲಿಸಲು ಪ್ರಯತ್ನಿಸಿದ ಮೇಲೆ, ಆ ಶಿಕ್ಷಕರು, ವಿದ್ಯಾರ್ಥಿಗಳು ಇರುವುದನ್ನು ಖಾತ್ರಿ ಪಡಿಸಿಕೊಳ್ಳಲು ಹೋದರು. ನಾನು ಶಾಲೆಯ ಒಂದು ಗೋಡೆಯ ಕಡೆಗೆ ನೋಡಿದಾಗ, ಕುಳಿತು ಬರೆಯುತ್ತಿರುವ ವಾಲ್ಮೀಕಿ ಮಹರ್ಷಿಯವರ ಚಿತ್ರವಿತ್ತು. ನನಗೆ ತುಂಬಾ ಸಂತೋಷವಾಯಿತು ಮತ್ತು ಅದರ ಮೇಲಿನ ನನ್ನ ದೃಷ್ಟಿಯನ್ನು ಕದಲಿಸಲು ಸಾಧ್ಯವಾಗಲಿಲ್ಲ. ಆ ಚಿತ್ರವನ್ನು ನೋಡುತ್ತಿರುವಂತೆ, ಅಲ್ಲಿ ನನಗೆ ಲೈಟ್ ಚಾನಲಿಂಗ್ ಸೆಷನ್ ನಡೆಸುವುದಕ್ಕೆ ಸಾಧ್ಯವಾಗುತ್ತದೆ ಎಂದು ನನ್ನ ಅಂತರ್ಬೋಧೆಯಿಂದ ಅರಿತುಕೊಂಡೆ. ಐದು ನಿಮಿಷದಲ್ಲೇ, ನಾನು ಲೈಟ್ ಚಾನಲಿಂಗ್ ಸೆಷನ್ ನಡೆಸಬಹುದೆಂದು ಹೇಳಿದರು!

–ಅಮೃತ ಓಬಲೇಶ್, ಕಾರ್ಯಕರ್ತೆ

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ